ಸಿದ್ಧತೆ – ಅರಿಶಿನ, ಕುಂಕುಮ, ಹೂವು, ಮಂತ್ರಾಕ್ಷತೆ, ಪಂಚಪತ್ರೆ, ಉದ್ಧರಣೆ. ಎಲ್ಲ ಗ್ರಂಥಗಳು, ಎಲ್ಲ ಪುಸ್ತಕಗಳನ್ನು ಕ್ರಮವಾಗಿ ಜೋಡಿಸಬೇಕು.

ಆಚಮನ, ಕೇಶವಾದಿ ನಾಮ ಚಿಂತನ, ಗೋವಿಂದಾಯ ನಮ:, ವಿಷ್ಣುವೇ ನಮ:...................... ಶ್ರೀಕೃಷ್ಣಾಯ ನಮ:

ಆವಾಹನ ಸಂಕಲ್ಪ – ಪ್ರಣವಸ್ಯ.......................................ಸಂವತ್ಸರೇ, ದಕ್ಷಿಣಾಯಣೇ, ಶರದೃತೌ, ಆಶ್ವೀಜ ಮಾಸೇ, ಮೂಲಾ ನಕ್ಷತ್ರೇ, ---------- ಯೋಗೇ, _____ಕರಣೇ, _______ವಾರೇ, ಸರಸ್ವತೀ/ವೇದವ್ಯಾಸಾಂ ಆವಾಹಯಾಮಿ.

ಆವಾಹನ ಚಿಂತನ ಕ್ರಮ – (ಆಧಾರ – ಶ್ರೀ ದೇವೇಂದ್ರ ತೀರ್ಥ ಬೋಧನೆ ಅನುಸಾರ)

– ನಾವು ಪೂಜೆಗೆ ಇರಿಸಿರುವ ಪುಸ್ತಕವೇ ವೇದವ್ಯಾಸ, ಸರಸ್ವತಿ ದೇವರಲ್ಲ. ಆ ಗ್ರಂಥಗಳಲ್ಲಿ ಶ್ರೀ ವೇದವ್ಯಾಸದೇವರು ತಮ್ಮ ಪತ್ನಿಯರಾದ ಚತುರ್ಕಪರ್ದ ಮತ್ತು ಅಂಭೃಣಿ (ಇಬ್ಬರೂ ಸಾಕ್ಷಾತ್ ಲಕ್ಷ್ಮೀ ದೇವಿಯರು) ಸಹಿತರಾಗಿ, ಬ್ರಹ್ಮ ವಾಯು ರುದ್ರಾದಿ ದೇವತೆಗಳಿಂದ ಅಭಿವಂದಿತರಾಗಿ ಸನ್ನಿಹಿತರಾಗಿರುತ್ತಾರೆ. ಅಂತಹ ವೇದವ್ಯಾಸ ದೇವರು ನಮಗೆ ಜ್ಞಾನ, ಭಕ್ತಿ, ವೈರಾಗ್ಯವನ್ನು ದಯಪಾಲಿಸಿ, ಶ್ರೀಮದಾಚಾರ್ಯರ ಗ್ರಂಥಗಳಲ್ಲಿ ಅಧ್ಯಯನ ಆಸಕ್ತಿಯನ್ನು, ದಯಪಾಲಿಸಬೇಕೆಂದು ಪ್ರಾರ್ಥಿಸಬೇಕು. ಆವಾಹನ ಸಂದರ್ಭದಲ್ಲಿ ಜ್ಞಾನರೂಪಿ ಹಯಗ್ರೀವ ದೇವರನ್ನು, ಪರಮಾತ್ಮನ ದಶಾವತಾರ ರೂಪಗಳನ್ನು ನೆನೆದು, ದುರ್ಗಾದೇವಿ, ಮುಖ್ಯಪ್ರಾಣದೇವರು, ಸರಸ್ವತಿ ಭಾರತೀ ದೇವರನ್ನೂ, ಸಪತ್ನೀಕ ಶೇಷ–ಗರುಡ ದೇವರನ್ನು, ಆಚಾರ್ಯ ಮಧ್ವರನ್ನೂ ಸ್ಮರಿಸಿ ಮಂತ್ರಾಕ್ಷತೆಯನ್ನು ಹಾಕಬೇಕು.

ಆವಾಹನ ಕ್ರಮ –

ವೇದ – ಭಾಷ್ಯ – ಸರ್ವಮೂಲ – ಶಾಸ್ತ್ರ– ಮುಂತಾದ ಗ್ರಂಥಗಳನ್ನು ಪೀಠದಲ್ಲಿರಿಸಿ, ರೇಷ್ಮೆವಸ್ತ್ರದಿಂದ ಮುಚ್ಚಿ, ಸಂಕಲ್ಪ ಮಾಡಿ, ಶ್ರೀ ವೇದವ್ಯಾಸ ಪ್ರೇರಣಯಾ, ಪುಸ್ತಕೇಷು ಸನ್ನಿಹಿತ ಸರಸ್ವತ್ಯಾತ್ಮಕ ಶ್ರೀ ವ್ಯಾಸ–ಪರಶುರಾಮ ಪೂಜಾಂ ಕರಿಷ್ಯೇ, ಎಂದು ಸರಸ್ವತಿಯನ್ನು ಆವಾಹಿಸಬೇಕು. ಇವರ ತೇಜೋಮಯವಾದ ಮೂರ್ತಿಗಳಲ್ಲಿ

ಮುಖ್ಯಪ್ರಾಣನನ್ನು ಧ್ಯಾನಿಸಿ ಮುಖ್ಯಪ್ರಾಣನಲ್ಲಿ ಶ್ರೀ ವೇದವ್ಯಾಸ ದೇವರನ್ನು, ಹಯಗ್ರೀವ, ದತ್ತಾತ್ರೇಯ, ಪರಶುರಾಮ, ಮಹಿದಾಸ, ಐತರೇಯ ಇವರನ್ನು ಈ ಕೆಳಗಿನ ಮಂತ್ರಗಳಿಂದ ಆವಾಹಿಸಬೇಕು. ಪೀಠಪೂಜೆಯನ್ನು ಮಾಡಿ ಆವಾಹಿಸಬೇಕು.

ಶ್ರೀ ಹಯಗ್ರೀವಾವಾಹನೆ –

ವಂದೇ ತುರಂಗವದನಂ ಶಶಿಬಿಂಬಸಂಸ್ಥಂ ಚಂದ್ರಾವದಾತಮಮೃತಾತ್ಮಕರೈಸ್ಸಮಂತಾತ್ ।
ಆಂಡಾಂತರಂ ಬಹಿರಪಿ ಪ್ರತಿಭಾಸಯಂತಂ ಶಂಖಾಕ್ಷಪುಸ್ತಕ – ಸುಬೋಧಯುತಾಬ್ಜ
ಬಾಹುಂ । ನಸ್ತ್ರೋ ಮುಖಾದಪಿ ನಿರಂತರ ಮುದ್ಗಿರಂತಂ ವಿದ್ಯಾ ಅಶೇಷತ ಉತಾಬ್ಜಭವೇಶ
ಮುಖ್ಯೈ: । ಸಂಸೇವ್ಯಮಾನ ಮತಿಭಕ್ತಿಭರಾಭಿನಮ್ರೈ: ಲಕ್ಷ್ಮ್ಯಾಮೃತೇನ ಸತತಂ
ಪರಿಷಿಚ್ಯಮಾನಂ । ಓಂ ಹಾಂ ಹಯಗ್ರೀವಾಯ ನಮ: । ಓಂ ಹಯಗ್ರೀವಂ ಆವಾಹಯಾಮಿ।

ಶ್ರೀ ಕಪಿಲ ದತ್ತಾತ್ರೇಯ ಧ್ಯಾನಂ ।

ಪ್ರೋದ್ಯದ್ದಿವಾಕರ ಸಮಾನತನುಂ ಸಹಸ್ರ
ಸೂರ್ಯೋರುದೀಧಿತಿಭಿರಾಪ್ತ ಸಮಸ್ತಲೋಕಂ ।
ಜ್ಞಾನಾಭಯಾಂಕಿತಕರಂ ಕಪಿಲಂ ಚ ದತ್ತಂ
ಧ್ಯಾಯೇದಜಾದಿಸಮಿತಿಂ ಪ್ರತಿಬೋಧಯಂತಂ ।
ಓಂ ಕಪಿಲಾಯ ನಮ: ಕಪಿಲಂ ಆವಾಹಯಾಮಿ । ಓಂ ದಂ ದತ್ತಾತ್ರೇಯಾಯ ನಮ:
ದತ್ತಾತ್ರೇಯಂ ಆವಾಹಯಾಮಿ ।

ಶ್ರೀ ರಾಮಾವಾಹನಂ –

ಶ್ಯಾಮಂ ರವೀಂದ್ವಮಿತ ದೀಧಿತಿಕಾಂತಿಯುಕ್ತಂ ಜ್ಞಾನಂ ಶರಂ ಚ ದಧತಂ
ಪ್ರಿಯಯಾಸಮೇತಂ । ಸ್ವಾತ್ಮ ಸ್ವರೂಪಮಮಿತಂ ಹನುಮನ್ಮುಖೇಷು
ಸಂದರ್ಶಯಂತಮಜಿತಂ ಸ್ಮರತೋರುಗೋಭಿ: ।
ಓಂ ರಾಂ ರಾಮಾಯ ನಮ: ಓಂ ರಾಮಂ ಆವಾಹಯಾಮಿ ।

ಶ್ರೀ ಕೃಷ್ಣಾವಾಹನಂ –

ಧ್ಯಾಯೇದ್ಧರಿಂ ಮಣಿನಿಭಂ ಜಗದೇಕವಂದ್ಯಂ ಸೌಂದರ್ಯಸಾರಂ ಅರಿಶಂಖವರಾಭಯಾನಿ ।

ದೋರ್ಭಿರ್ದಧಾನಂ ಅಜಿತಂ ಸರಸಂ ಚ ಭೈಷ್ಮೀ ಸತ್ಯಾ ಸಮೇತಂ
ನಿಖಿಲಪ್ರದಮಿಂದಿರೇಶಂ । ಓಂ ಕ್ಲೀಂ ಕೃಷ್ಣಾಯ ನಮ: ಓಂ ಶ್ರೀ ಕೃಷ್ಣಂ ಆವಾಹಯಾಮಿ ।

ಪರಶುರಾಮಾವಾಹನಂ –

ಅಂಗಾರವರ್ಣಮಭಿತೋಂಡ ಬಹಿ: ಪ್ರಭಾಭಿ: ವ್ಯಾಪ್ತಂ ಪರಶ್ವದ ಧನುರ್ಧರಮೇಕವೀರಂ ।
ಧ್ಯಾಯೇದಜೇಶ ಪುರುಹೂತ ಮುಖ್ಯೈಸ್ತುವದ್ಭಿ: ಆವಿರ್ತಮಾತ್ಮಪದವೀಂ
ಪ್ರತಿಪಾದಯಂತಂ ।
ಓಂ ಭಾಂ ಭಾರ್ಗವಾಯ ನಮ: ಓಂ ಭಾರ್ಗವರಾಮಂ ಆವಾಹಯಾಮಿ ।

ನೃಸಿಂಹಾವಾಹನಂ –

ಧ್ಯಾಯೇನ್ ನೃಸಿಂಹಮುರುವೃತ್ತರವಿತ್ರಿನೇತ್ರಂ ।
ಜಾನು ಪ್ರಸಕ್ತಕರಯುಗ್ಮಮಥಾಪರಾಭ್ಯಂ ।
ಚಕ್ರಂ ದರಂ ಚ ದಧತಂ ಪ್ರಿಯಯಾ ಸಮೇತಂ
ತಿಗ್ಮಾಂಶುಕೋಟ್ಯಧಿಕತೇಜಸ ಮಗ್ರಶಕ್ತಿಂ ।

ವೇದವ್ಯಾಸಾವಾಹನಂ –

ವಿಜ್ಞಾನರೋಚಿ: ಪರಿಪೂರಿತಾಂತ: ಬಾಹ್ಯಾಂಡಕೋಶಂ ಹರಿತೋಪಲಾಭಂ ।
ತರ್ಕಾಭಯೇತಂ ವಿಧಿಶರ್ವಪೂರ್ವಗೀರ್ವಾಣ – ವಿಜ್ಞಾನದಮಾನತೋಸ್ಮಿ ।
ಮಂತ್ರಾಕ್ಷತೆಯನ್ನು ಹಾಕಬೇಕು

ಶ್ರೀ ವೇದವ್ಯಾಸ ಗಾಯತ್ರಿ ।

ಓಂ ಪೂರ್ಣಪ್ರಜ್ಞಾನಾಯ ವಿದ್ಮಹೇ ಪೂರ್ಣಾನಂದಾಯ ಧೀಮಹಿ ।
ತನ್ನೋ ವ್ಯಾಸ: ಪ್ರಚೋದಯಾತ್ ।
ಓಂ ವ್ಯಾಂ ವೇದವ್ಯಾಸಾಯ ನಮ: ವೇದವ್ಯಾಸಂ ಆವಾಹಯಾಮಿ ।

ಶ್ರೀ ಧ್ಯಾನಂ ।

ಓಂ ಪೂರ್ಣಜ್ಞಾನಾಯ ವಿದ್ಮಹೇ ಪೂರ್ಣಾನಂದಾಯ ಧೀಮಹಿ ।
ತನ್ನೋ ವ್ಯಾಸ: ಪ್ರಚೋದಯಾತ್ ।

ಓಂ ವ್ಯಾಂ ವೇದವ್ಯಾಸಾಯ ನಮ: ವೇದವ್ಯಾಸಂ ಆವಾಹಯಾಮಿ ।
ಓಂ ಕೌಶೇಯಪೀತವಸನಾಂ ಓಂ ಲಕ್ಷ್ಮ್ಯೈ ನಮ: ಲಕ್ಷ್ಮೀಮಾವಾಹಯಾಮಿ ।
ಓಂ ಶ್ರೀಂ ಓಂ ಶ್ರಿಯಮಾವಾಹಯಾಮಿ । ಓಂ ಕೌಶೇಯಪೀತವಸನಾಂ ಅರವಿಂದನೇತ್ರಾಂ
ತಾಂಬೂಲನೀಲ ಕುಸುಮಾಭಯ ಸದ್ವರೇತಾಂ ।
ಶ್ಯಾಮಾಂಕಕಾಂತಿಸಹಿತಾಂ ಪರಮಾಂಕ ಸಂಸ್ಥಾಂ ಧ್ಯಾಯೇದ್ ವಿಧೀಶನುತಪಾದಯುಗಾಂ
ಜನೀತ್ರೀಂ ಏತತ್ ಸಚ್ಛಾಸ್ತ್ರ ಪುಸ್ತಕ – ಲಿಪಿರೇಖಾಂತ ತೇಜೋಮಯರೇಖಾಂತ:
ಪ್ರಾಣ ರೇಖಾಯಾಂ ಸ್ಥಿತಂ ಧರ್ಮನಾರಾಯಣ – ಮಹಿದಾಸ ಕಪಿಲ ದತ್ತಾತ್ರೇಯ –
ಹಯಗ್ರೀವ – ನಾರಸಿಂಹ – ರಾಮ – ಕೃಷ್ಣ –
ಪರಶುರಾಮ – ವ್ಯಾಸ – ಹರಿ – ಪ್ರಾಜ್ಞ ಪುರುಷಾತ್ಮಕ ಸರ್ವದೇವಾಭಿಮಾನಿ
ಸರ್ವವಿದ್ಯಾದ್ರಷ್ಟ್ರು ಶ್ರೀ ಬ್ರಹ್ಮಾಣೀ ಭಾರತ್ಯಂತರ್ಗತ
ಸ್ತ್ರೀರೂಪಂ ವ್ಯಾಸಂ ಸಂಮುಖೀಕರೋಮಿ।

ತತ್ಸನ್ನಿಧಾನೇ ಶ್ರೀ ಭೂ ದುರ್ಗಾಂಭೃಣೀಂ, ಹ್ರೀಂ ಮಾಯಾ –
ಜಯಾ – ಕೃತೀ – ಶಾಂತೀ – ಲಕ್ಷ್ಮೀ – ಜಯಂತೀ – ಜಾನಕೀ –
ಸತ್ಯಾ – ರುಕ್ಮಿಣೀ, ಸ್ವಯಂ ಪ್ರೀತ್ಯಾಖ್ಯ ವ್ಯಾಸ ಭಾರ್ಯಾತ್ಮಿಕಾಂ ರಮಾಂ ,
ಬ್ರಹ್ಮಪ್ರಾಣ – ಶ್ರೀಮದ್ಧನುಮದ್ಭೀಮ ಮಧ್ವಾನ್,
ಸರಸ್ವತೀ ಭಾರತ್ಯೌ, ಶೇಷ – ರುದ್ರ – ಪಾರ್ವತೀ ವಿನಾಯಕಾನ್ ಬಾದರಿಂ,
ಜೈಮಿನೀಂ, ಸುಮಂತುಂ, ವೈಶಂಪಾಯನಂ ಆಶ್ಮರಥ್ಯಂ, ಪೈಲಂ, ಕಾಶಕೃತ್ಸ್ನಂ,
ಲೋಮಶಂ, ಏತಾನ್ ವ್ಯಾಸಶಿಷ್ಯಾನ್ । ಗುಂಗುಂ, ಸಿನೀವಾಲೀಂ, ರಾಕಾಂ, ಸರಸ್ವತೀಂ,
ಇಂದ್ರಾಣೀಂಮ್ ವರುಣಾನೀಂ ಚ ಏತಾ: ಸೂಕ್ತದೇವತಾ: ।

ಶ್ರೀಮದಾನಂದತೀರ್ಥ, ಜಯತೀರ್ಥ, ವ್ಯಾಸತೀರ್ಥಾದೀನ್, ಭಾಷ್ಯ, ಟೀಕಾ, ಟಿಪ್ಪಣೀ
ಕರ್ತ್ಯಾನ್ ಆವಾಹಯಾಮಿ ।
ಕೃಪಯಾ ಸಂಮುಖೀಭವಂತು ಭವಂತ: ।
ಇತಿ ಪ್ರಾರ್ಥ್ಯ – ಪುಷ್ಪಾಂಜಲಿಂ ಸಮರ್ಪ್ಯ । ಗೃಹಾ ವೈ ಪ್ರತಿಷ್ಠಾಸೂಕ್ತಂ
ತತ್ಪ್ರತಿಷ್ಠಿತತಮಯಾ ವಾಚಾ ಶಂಸ್ತವ್ಯಂ, ತಸ್ಮಾದ್ ಯದ್ಯಪಿ ದೂರ ಇವ ಪಶೂನ್
ಲಭತೇ, ಗೃಹಾನೇವೈ ನಾನಾ ಜಿಗಮಿಷತಿ, ಗೃಹಾ ಹಿ ಪಶೂನಾಂ ಪ್ರತಿಷ್ಠಾ ಪ್ರತಿಷ್ಠಾ
ಉತ್ತಮಾ ಪ್ರತಿಷ್ಠಾ ।

ದುರ್ಗಾವಾಹನಂ –

ಓಂ ಕೌಶೇಯ ರಕ್ತವಸನಾಂ ಕಮಲತ್ರಿನೇತ್ರಾಂ ।
ಚಕ್ರಾಬ್ಜತರ್ಜನಸುಶೂಲ ಯುತಾಬ್ಜಹಸ್ತಾಂ ।
ಉದ್ಯಚ್ಛತಾರ್ಕಸದೃಶೀಂ ಪರಮಾಂಕ ಸಂಸ್ಥಾಂ ।
ಧ್ಯಾಯೇದ್ ವಿಧೀಶನುತಪಾದಯುಗಾಂ ಜನಿತ್ರೀಂ ।
ಓಂ ದುಂ ದುರ್ಗಾಯೈ ನಮ: ದುರ್ಗಾಂ ಆವಾಹಯಾಮಿ ।

ಪ್ರಾಣಾವಾಹನಂ –

ಉದ್ಯದ್ ರವಿಪ್ರಕರ ಸನ್ನಿಭಮಚ್ಯುತಾಂಕೇ ಸ್ವಾಸೀನಮಸ್ಯ ನುತಿನುತ್ಯವಚ: ಪ್ರವೃತ್ತಿಂ ।
ಧ್ಯಾಯೇದ್ ಗದಾಭಯಕರಂ ಸುಕೃತಾಂಜಲಿಂ ತಂ ।
ಪ್ರಾಣಂ ಯಥೇಷ್ಟತನುಮುನ್ನತಕರ್ಮಶಕ್ತಿಂ ।
ಓಂ ಪ್ರಾಣಾಯ ನಮ: ಪ್ರಾಣಾಮಾವಾಹಯಾಮಿ ।

ಸರಸ್ವತೀ ಧ್ಯಾನಂ –

ಉದ್ಯದ್ ದಿವಾಕರ ಸಮೂಹನಿಭಾಂ
ಸ್ವಭರ್ತುರಂಕಸ್ಥಿಮಾಭಯಸದ್ವರಬಾಹುಯುಗ್ಮಾಂ ।
ಮುದ್ರಾಂ ಚ ತತ್ವದೃಶಯೇ ವರಪುಸ್ತಕಂ ಚ ।
ದೋರ್ಯುಗ್ಮಕೇನ ದಧತೀಂ ಸ್ಮರತಾತ್ಮಸಂಸ್ಥಾಂ ।
ಓಂ ಸರಸ್ವತ್ಯೈ ನಮ: ಸರಸ್ವತೀಮಾವಾಹಯಾಮಿ ।

ಭಾರತೀ ಧ್ಯಾನಂ –

ಭಾರತೀಂ ಸರ್ವವೇದಾಢ್ಯಾಂ ಭರುತುರಂಕಸ್ಥಿತಾಂ ಸತೀಂ ।
ಧ್ಯಾಯಂತೀ ಸತತಂ ವಿಷ್ಣುಂ ಧ್ಯಾಯೇತ್ ಸರ್ವಾರ್ಥಸಿದ್ಧಯೇ ।
ಓಂ ಭಾರತ್ಯೈ ನಮ: ಭಾರತೀಮಾವಾಹಯಾಮಿ ।

(ಈ ರೀತಿಯಾಗಿ ಸಕಲ ಗ್ರಂಥಾಭಿಮಾನಿಗಳನ್ನೂ ಆವಾಹಿಸಬೇಕು. ಮಂತ್ರಾಕ್ಷತೆ ನೀರನ್ನು ಬಿಡಬೇಕು. – ಆಶ್ವಯುಜ ಶುದ್ಧ ಸಪ್ತಮಿ ಮೂಲಾ ನಕ್ಷತ್ರದಂದು ಆವಾಹಿಸಬೇಕು.

ಅಕಸ್ಮಾತ್ ಸಪ್ತಮಿ ದಿನ ಮೂಲಾ ನಕ್ಷತ್ರವಿರದಿದ್ದರೆ, ಯಾವ ದಿನ ಮೂಲಾ ನಕ್ಷತ್ರವಿರುವುದೋ ಆ ದಿನ ಆವಾಹಿಸಬೇಕು.)

ಸಾನ್ನಿಧ್ಯಂ ಕುರು ದೇವೇಶ ಸರ್ವಸಂಪತ್ಕರೋ ಭವ ।
ವಿಭೋ ಸಕಲಲೋಕೇಶ ವಿಷ್ಣೋ ಜಿಷ್ಣೋ ಹರೇ ಪ್ರಭೋ ।
ತ್ವಾಂ ಭಕ್ತ್ಯಾ ಪೂಜಯಾಮ್ಯದ್ಯ ಭೋಗೈರರ್ಘ್ಯಾದಿಭಿ: ಕ್ರಮಾತ್ ।
ಪೂಜಾವಸಾನಪರ್ಯಂತಂ ಅತ್ರ ಸ್ಥಿತ್ವಾ ಜನರ್ದನ ।
ಭಕ್ತಸ್ಯ ಮಮ ಪೂಜಾಂ ತ್ವಂ ಗೃಹೀತ್ವಾ ಪಾಹಿ ಮಾಂ ಪ್ರಭೋ ।
ಭೋ ಸ್ವಾಮಿನ್ ಜಗತಾಂ ನಾಥ ಯಾವತ್ಪೂಜಾವಸಾನಕಂ ।
ತಾವತ್ವಂ ಪ್ರೀತಿಭಾವೇನ ಬಿಂಬೇ ಸನ್ನಿಹಿತೋ ಭವ ॥

।ಇತಿ ಪ್ರಾರ್ಥನಾ ಮುದ್ರಯಾ ಸಂಪ್ರಾರ್ಥ್ಯ ।

ಸುಪ್ರತಿಷ್ಟಿತಮಸ್ತು ಓಂ । ಆವಾಹಿತೋ ಭವ । ಸ್ಥಾಪಿತೋ ಭವ ।
ಸನ್ನಿಹಿತೋ ಭವ । ಸನ್ನಿರುದ್ಧೋ ಭವ । ಪ್ರಸೀದ ಪ್ರಸೀದ ।
ಸಾನ್ನಿಧ್ಯಂ ಕುರು ದೇವೇಶ ಸರ್ವಸಂಪತ್ಕರೋ ಭವ ।
ವಿಭೋ ಸಕಲಲೋಕೇಶ ವಿಷ್ಣೋ ಜಿಷ್ಣೋ ಹರೇ ಪ್ರಭೋ: ।
ಯಾಗಾವಸಾನಪರ್ಯಂತಂ ಅತ್ರ ಸ್ಥಿತ್ವಾ ಜನಾರ್ಧನ: \
ಭಕ್ತಸ್ಯ ಮಮ ಪೂಜಾಂ ತ್ವಂ ಗೃಹೀತ್ವಾ ಪಾಹಿ ಮಾ ಪ್ರಭೋ ।

ಓಂ ನಮೋ ನಾರಾಯಣಾಯ ಓಂ । ಓಂ ವೇದವ್ಯಾಸಾಯ ನಮ: ಧ್ಯಾಯಾಮಿ ।
ಹೀಗೆ ಆವಾಹನಾದಿಗಳನ್ನು ಮಾಡಬೇಕು.

ನೈವೇದ್ಯಮಾಡಿ ನಂತರ ರಮಾದೇವ್ಯಾದಿಗಳಿಗೆ ನೈವೇದ್ಯವನ್ನು ಮಾಡಿ, ಗಂಧಾದಿಗಳನ್ನು ವ್ಯಾಸಶಿಷ್ಯಾದಿಗಳಿಗೆ ನೀಡಬೇಕು. ಅಂಭೃಣೀಸೂಕ್ತ, ಮನ್ಯುಸೂಕ್ತ, ಸರಸ್ವತೀ ಸೂಕ್ತ, ರಾತ್ರೀ ಸೂಕ್ತಾದಿಗಳನ್ನು ಪಠಿಸಬೇಕು.

ಪೂಜೆ – ಮೂಲಾ ನಕ್ಷತದಲ್ಲಿ ಆವಾಹಿಸಿದ ಮೇಲೆ ಮುಂದಿನ ದಿನಗಳಲ್ಲಿ ಅಂದರೆ ಪೂರ್ವಾಷಾಢ ನಕ್ಷತ್ರ ಮತ್ತು ಉತ್ತರಾಷಾಢ ನಕ್ಷತ್ರ ದಿನಗಳಲ್ಲಿ, ಶ್ರವಣ ನಕ್ಷತ್ರದ ದಿನ ಕೂಡ ಹರಿದ್ರಾ, ಕುಂಕುಮ, ಸುಗಂಧಿತ ಪುಷ್ಪಗಳಿಂದ ಪೂಜಿಸಬೇಕು. ನೈವೇದ್ಯವನ್ನು ಸಮರ್ಪಿಸಬೇಕು.

ಅನೇನ ಶ್ರೀ ಸರಸ್ವತ್ಯಾತ್ಮಕ ವ್ಯಾಸಪರಶುರಾಮ ಪೂಜನೇನ ಭಗವಾನ್ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀವ್ಯಾಸಪರಶುರಾಮ: ಪ್ರೀಯತಾಂ ।

ಈರೀತಿಯಾಗಿ ಮೂರುದಿನಗಳ ಪರ್ಯಂತ (ಸಪ್ತಮಿಯಿಂದ ನವಮಿಯವರೆಗೂ) ವೇದವ್ಯಾಸ/ಸರಸ್ವತೀ ದೇವರನ್ನು ಪೂಜಿಸಬೇಕು. ಪ್ರತಿದಿನ ನೈವೇದ್ಯ, ಗಂಧಾದಿಗಳನ್ನು, ಸೂಕ್ತ ಪಠನಗಳನ್ನು (ಮೇಲೆ ಹೇಳಿದಂತೆ) ಮಾಡಬೇಕು.

ಮೂಲಾ ನಕ್ಷತ್ರದಲ್ಲಿ ಆವಾಹಿಸಬೇಕು

ವಿಸರ್ಜನೆ –

ಶ್ರವಣ ನಕ್ಷತ್ರವಿರುವ ದಿನ (ಆದಿಭಾಗದಲ್ಲೇ) ವಿಸರ್ಜನೆ ಮಾಡಬೇಕು.

ಉತ್ತಿಷ್ಠ ಬ್ರಹ್ಮಣಸ್ಪತೇ ದೇವಯಂತಸ್ತ್ವೇಮಹೇ ।
ಉಪಪ್ರಯಂತು ಮರುತಸ್ಸುದಾನವ ಇಂದ್ರಾಪ್ರಾಶೂರ್ಭವಾ ಸಚಾ ।
ಯಥಾಸ್ಥಾನಂ ಉದ್ವಾಸಯಾಮಿ ।
(ಈ ಮಂತ್ರದಿಂದ ವಿಸರ್ಜಿಸಬೇಕು – ಪುಸ್ತಕವನ್ನು ಅಲುಗಾಡಿಸಿ ವಿಸರ್ಜಿಸಬೇಕು)

ವಿಸರ್ಜನೆಯ ದಿನ "ಯಸ್ಯಸ್ಮೃತ್ಯಾಚ" ಮಂತ್ರವನ್ನು ಹೇಳಿಕೊಂಡು, ನಾಮತ್ರಯಮಂತ್ರವನ್ನು ಜಪಿಸಿ, ಕೃಷ್ಣಾರ್ಪಣವೆನ್ನಬೇಕು.

ಸೂಚನೆ – ಸರಸ್ವತಿ ಮತ್ತು ವೇದವ್ಯಾಸರನ್ನು ಆವಾಹಿಸಿದ ನಂತರ ಆ ಗ್ರಂಥಗಳನ್ನು ನೂತನ ಅಧ್ಯಯನಕ್ಕೆ ಉಪಯೋಗಿಸುವಂತಿಲ್ಲ. ಈ ನಾಲ್ಕು ದಿನಗಳು ಅಂದರೆ ಮೂಲ ನಕ್ಷತ್ರದಿಂದ ಶ್ರವಣ ನಕ್ಷತ್ರದ ವರೆಗೂ ಅನಧ್ಯಯನ ಕಾಲ. ಆದರೆ ಅನಧ್ಯಯನದ ಕಾಲದ

ಹೊಸ ಪಾಠವನ್ನು ಅಭ್ಯಸಿಸಬಾರದು, ಹಳೆ ಪಾಠವನ್ನು ಚಿಂತನೆ ಮಾಡಬಹುದು, ಪಾರಾಯಣ ಮಾಡಬಹುದು.